**ಚಿತ್ರಪಟ ಕಥನ**

# ಕಾವ್ಯ ರುಚಿಸದು ಯಾರಿಗೆ?

■ ಎಂ.ಆರ್. ಮಂಜುನಾಥ್



ನೆರಳು ಬೆಳಕಿನ ಸಂಯೋಜನೆ ಛಾಯಾಗ್ರಹಣದ ಮುಖ್ಯ ಸಂಗತಿಗಳಲ್ಲೊಂದು. ಬೆಳಕಿನ ಕಣ್ಣಾಮುಚ್ಚಾಲೆಯ ಆಟ ಅರಿತವರು ಉತ್ತಮ ಫೋಟೊಗಳನ್ನು ತೆಗೆಯಬಲ್ಲರು. ನೆರಳು ಮತ್ತು ಬೆಳಕು ಪ್ರಕೃತಿಯ ಕಣ್ಣಸನ್ನೆಗೆ ತಕ್ಕಂತೆ ಕ್ಷಣ ಕ್ಷಣಕ್ಕೂ ಬದಲಾಗುತ್ತಿರುತ್ತದೆ. ಕ್ಯಾಮೆರಾ ಕಣ್ಣು ಹೊಂದಿಕೊಳ್ಳುವುದರೊಳಗೆ ಸಂಯೋಜನೆಯೇ ವ್ಯತ್ಯಾಸವಾಗಿಬಿಡುತ್ತದೆ. ಈ ನೆರಳು ಬೆಳಕಿನ ದೃಶ್ಯಗಳಲ್ಲಿ ಬಾನಾಡಿಗಳ ಚಿತ್ರಗಳನ್ನು ಸೆರೆಹಿಡಿಯುವುದು ಯಾವುದೇ ಛಾಯಾಗ್ರಾಹಕನಿಗೆ ಸವಾಲು ಆಗಿರುವಂತೆಯೇ ಖುಷಿ ಕೊಡುವ ಸಂಗತಿಯೂ ಹೌದು.

ಸೂರ್ಯ ಆಕಳಿಸುತ್ತಾ ಕಣ್ಣುಜ್ಜಿಕೊಳ್ಳುವ ಸಮಯದಲ್ಲಿ ಕ್ಲಿಕ್ಕಿಸಿದ ಇಲ್ಲಿನ ಚಿತ್ರಪಟಗಳು ಬಾನಾಡಿಗಳ ಸೌಂದರ್ಯದೊಂದಿಗೆ ಪ್ರಕೃತಿ ಚೈತನ್ಯ ಪಡೆಯುವ ಕ್ಷಣಗಳನ್ನೂ ಕಾಣಿಸುವಂತಿವೆ. ನೀರಿನಲ್ಲಿ ಮುಳುಗಿಬಂದಿರುವ ಪಕ್ಷಿಯೊಂದು ಆಕಾಶದಲ್ಲೂ ನೀರಿನ ಹನಿಗಳ ಚಿತ್ತಾರ ಬಿಡಿಸಿದೆ. ಪೆಲಿಕಾನ್ ಹಕ್ಕಿಯೊಂದು ನೀರಿನಲ್ಲಿ ಮುಳುಗೇಳುವಾಗ ಅದರ ಮೈಯನ್ನು ಹೊಂಗಿರಣಗಳು ಮುದ್ದಿಸುತ್ತಿವೆ. ಜೇನುಹುಳು ಭಕ್ಷಕಗಳ ನೋಟ ಮತ್ತು ಆಟದಲ್ಲಿ ಹತ್ತಾರು ಕಥೆಗಳಿರುವಂತಿದೆ. ಬಾನಾಡಿಗಳ ಹಾರಾಟ, ಆಹಾರದ ಹುಡುಕಾಟದ ಕ್ಷಣಗಳು ಕಣ್ಣುಗಳಿಗೆ ತಂಪು ನೀಡುವಂತಿವೆ. ಬಾನಾಡಿಗಳ ಜೊತೆಗೆ ಚಿನ್ನದ ಮೈಯ ಜಿಂಕೆಯೂ ಇಲ್ಲಿದೆ.

ಈ ಚಿತ್ರಪಟಗಳು ಪ್ರಕೃತಿ ಸೌಂದರ್ಯದ ಪ್ರತಿಕೃತಿಗಳಷ್ಟೇ ಅಲ್ಲ, ಆ ಪ್ರಕೃತಿಯಲ್ಲಿ ಜೀವಸಂಚಾರ ಉಂಟಾಗಿರುವ ಕ್ಷಣಗಳ ದರ್ಶನವೂ ಹೌದು. ಈ ಛಾಯಾಚಿತ್ರಗಳನ್ನು ನೋಡುತ್ತಿದ್ದರೆ ಕಾವ್ಯ ಯಾರಲ್ಲಿ ಹುಟ್ಟುವುದಿಲ್ಲ ಹೇಳಿ.

ಪ್ರತಿಕ್ರಿಯಿಸಿ: feedback@sudha.co.in



ಸುವ್ವಿ ಹಕ್ಕಿ ಹಾರುತಿದೆ ನೋಡಿದಿರಾ...



ಸ್ಟಿಲ್ಟ್‌ನ ಆಹಾರ ಹುಡುಕಾಟ

